## 2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 21

# ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017

### ಪ್ರಕರಣಗಳ ಪಟ್ಟಿ

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧರಣೆ
4. 1978ರ ಏಪ್ರಿಲ್ 27ರ ತರುವಾಯದಿಂದ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜ್ಯೇಷ್ಠತೆಯ ಸಂರಕ್ಷಣೆ
5. ಪುನರಾವಲೋಕನಕ್ಕಾಗಿ ಅವಕಾಶ
6. ನಿಯಮಗಳ ರಚನಾಧಿಕಾರ
7. ತೊಂದರೆಗಳನ್ನು ನಿವಾರಿಸಲು ಅಧಿಕಾರ
8. ನಿರಸನ
9. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಕೈಗೊಂಡ ಕ್ರಮಗಳ ಸಿಂಧುತ್ವ

ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2018ರ ಅಧಿನಿಯಮ ಸಂಖ್ಯೆ 21.–** ಈ ಮುಂದಿನ ಸನ್ನಿವೇಶಗಳಲ್ಲಿ, ಎಂದರೆ:–

ಕರ್ನಾಟಕ ಸರ್ಕಾರವು ದಿನಾಂಕ: 27.04.1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಪರವಾಗಿ ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಪ್ರಾರಂಭಿಸಿರುವುದರಿಂದ;

ಮೀಸಲಾತಿ ಆದೇಶದ 7ನೇ ಕಂಡಿಕೆಯಲ್ಲಿ, ಯಾವುದೇ ಸಂದರ್ಭದಲ್ಲಿ ಆ ಆದೇಶಕ್ಕನುಸಾರವಾಗಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 4 ಅಥವಾ ಸಂದರ್ಭಾನುಸಾರವಾಗಿ 4–ಎ ನಿಯಮದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ನಿರ್ಧರಿಸತಕ್ಕದ್ದೆಂದು ವಿಧಿಸಲಾಗಿರುವುದರಿಂದ;

ಭಾರತದ ಸರ್ವೋಚ್ಚ ನ್ಯಾಯಾಲಯವು, ಎಂ.ಜಿ. ಬಡಪ್ಪನವರ್ ಹಾಗೂ ಮತ್ತೊಬ್ಬರು –ವಿರುದ್ಧ –ಕರ್ನಾಟಕ ರಾಜ್ಯ ಮತ್ತು ಇತರರು, ಸಿವಿಲ್ ಅಪೀಲು ಸಂಖ್ಯೆ. 6970–6971:2000 ಇದರ ಜೊತೆಗೆ ಸಿವಿಲ್ ಅಪೀಲು ಸಂಖ್ಯೆ: 6972:2000 (ಎಐಆರ್ 2001 ಎಸ್‌ಸಿ 260) ಮೊಕದ್ದಮೆಗೆ ಸಂಬಂಧಿಸಿದ 01.12.2000ದ ತನ್ನ ತೀರ್ಪಿನಲ್ಲಿ ಮೀಸಲಿಟ್ಟ ಪ್ರವರ್ಗಗಳಿಗೆ ಮತ್ತು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳ ನಡುವೆ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿಷಯದ ಕುರಿತು ವ್ಯವಹರಿಸುವಾಗ ಅಜಿತ್ ಸಿಂಗ್ ಮತ್ತು ಇತರರು (II) –ವಿರುದ್ಧ – ಪಂಜಾಬ್ ರಾಜ್ಯ ಮತ್ತು ಇತರರು, (1999) 7 ಎಸ್‌ಸಿಸಿ 209 ಇದರಲ್ಲಿ ಸಂವಿಧಾನ ಪೀಠದ ತೀರ್ಮಾನದಲ್ಲಿ ಹೇಳಿದ ತತ್ವಕ್ಕನುಸಾರವಾಗಿ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 2(ಸಿ), ನಿಯಮ 4 ಮತ್ತು ನಿಯಮ 4–ಎ ಯನ್ನು ಪರೀಕ್ಷಿಸಿತು ಮತ್ತು (ಮೀಸಲಿಟ್ಟ) ರೋಸ್ಟರ್ ಬಿಂದುವಿಗೆ ಪ್ರತಿಯಾಗಿ ಬಡ್ತಿ ಹೊಂದಿದ ವ್ಯಕ್ತಿಯ ಜ್ಯೇಷ್ಠತೆಯನ್ನು ನಿರ್ಧರಿಸುವ ಸಂಬಂಧದಲ್ಲಿ ಯಾವುದೇ ನಿರ್ದಿಷ್ಟ ನಿಯಮವಿಲ್ಲವೆಂದು ಅಭಿಪ್ರಾಯಪಟ್ಟಿರುವುದರಿಂದ;

ಸಂಸತ್ತು ಆ ತರುವಾಯ, ಮೀಸಲಾತಿ ಆಧಾರದ ಮೇಲೆ ಬಡ್ತಿಯ ಸಂದರ್ಭದಲ್ಲಿ ತತ್ಪರಿಣಾಮದ ಜ್ಯೇಷ್ಠತೆಯನ್ನು ನೀಡುವುದಕ್ಕಾಗಿ, ಸಂವಿಧಾನದ 16ನೇ ಅನಚ್ಛೇಧದ (4ಎ) ಖಂಡವನ್ನು ಸೇರಿಸಲು ಉಪಬಂಧ ಕಲ್ಪಿಸುವ ಮೂಲಕ ಸಂವಿಧಾನದ (ಎಂಬತ್ತೈದನೇ ತಿದ್ದುಪಡಿ) ಅಧಿನಿಯಮ, 2001ನ್ನು 17.06.1995ರಿಂದ ಪೂರ್ವಾನ್ವಯವಾಗುವಂತೆ ಅಧಿನಿಯಮಿಸಿರುವುದರಿಂದ;

ಮೀಸಲಾತಿ ಆದೇಶದಲ್ಲಿ ಒಳಗೊಂಡ ಬಡ್ತಿಯಲ್ಲಿನ ಮೀಸಲಾತಿ ನೀತಿಗೆ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು, ಇತರ ಪ್ರವರ್ಗಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಲಭ್ಯವಿರುವಂತೆ ಜ್ಯೇಷ್ಠತೆಗೆ ಅರ್ಹರಾಗತಕ್ಕದ್ದೆಂಬುದನ್ನು ಸ್ಪಷ್ಟಪಡಿಸಲು ಮತ್ತು ಯಾವುದೇ ಅಸ್ಪಷ್ಟತೆಯನ್ನು ತೊಡೆದುಹಾಕಲು, ಕರ್ನಾಟಕ ಸರ್ಕಾರವು, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧರಣೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನುಮುಂದೆ 2002ರ ಕರ್ನಾಟಕ ಅಧಿನಿಯಮ 10 ಎಂದು ಉಲ್ಲೇಖಿಸಲಾಗಿದೆ) ಅಧಿನಿಯಮಿಸಿರುವುದರಿಂದ;

ಶ್ರೀ ಎಂ. ನಾಗರಾಜ್ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯ ಎಂಬ ಶೀರ್ಷಿಕೆಯನ್ನು ಹೊಂದಿರುವ ರಿಟ್ ಅರ್ಜಿ ಸಂಖ್ಯೆ 61/2002ರಲ್ಲಿ, 2002ರ ಕರ್ನಾಟಕ ಅಧಿನಿಯಮ 10ರ ಮತ್ತು 16(4ಎ) ಮತ್ತು 16 (4ಬಿ) ಅನುಚ್ಛೇದಗಳಿಗೆ ಸಾಂವಿಧಾನಿಕ ತಿದ್ದುಪಡಿಗಳ ಸಿಂಧುತ್ವವನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಸದರಿ ಮೊಕದ್ದಮೆಯಲ್ಲಿ ಸರ್ವೋಚ್ಛ ನ್ಯಾಯಾಲಯವು 16 (4ಎ) ಮತ್ತು 16 (4ಬಿ) ಅನುಚ್ಛೇದಗಳ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿದ್ದು ಮತ್ತು ಯುಕ್ತ ರಾಜ್ಯಗಳ ಪ್ರತ್ಯೇಕ ಅಧಿನಿಯಮಗಳ ಸಿಂಧುತ್ವವನ್ನು ಪ್ರತ್ಯೇಕ ರಿಟ್ ಅರ್ಜಿಗಳಲ್ಲಿ ಯುಕ್ತ ಪೀಠದ ಮೂಲಕ ಕೈಗೊಳ್ಳಲು ತಿಳಿಸಿದೆ. ಕರ್ನಾಟಕ ಉಚ್ಛ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 14655/2010ರಲ್ಲಿ 2002ರ ಕರ್ನಾಟಕ ಅಧಿನಿಯಮದ 10ರ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಿದೆ ಮತ್ತು ಶ್ರೀ ಎಂ. ನಾಗರಾಜ್ ಇವರ ಮೊಕದ್ದಮೆಯಲ್ಲಿ ಸರ್ವೋಚ್ಛ ನ್ಯಾಯಾಲಯದ ಮೂಲಕ ನಿರ್ದಿಷ್ಟಪಡಿಸಲಾದ ಪರೀಕ್ಷೆಗಳನ್ನು ಇದು ತೃಪ್ತಿಗೊಳಿಸಿರುವುದರಿಂದ ಇದು ಶಾಸನದ ಒಂದು ಸಿಂಧುವಾದ ಅಂಶವಾಗಿದೆ ಎಂದು ಘೋಷಿಸಿದೆ. ಬಿ.ಕೆ. ಪವಿತ್ರ ಮೊಕದ್ದಮೆಯಲ್ಲಿ ಸರ್ವೋಚ್ಛ ನ್ಯಾಯಾಲಯದ ಮುಂದೆ ಮೇಲ್ಮನವಿಯಲ್ಲಿ, ಕರ್ನಾಟಕ ಉಚ್ಛ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯದ ಸರಿತನವನ್ನು ಆಕ್ಷೇಪಿಸಿರುವುದರಿಂದ;

2011ರ ಸಿವಿಲ್ ಅಪೀಲು ಸಂಖ್ಯೆ: 2368ರಲ್ಲಿ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ಮತ್ತು ಎಂ. ನಾಗರಾಜ್ ಇವರ 2002ರ ರಿಟ್ ಅರ್ಜಿ ಸಂಖ್ಯೆ: 61ರಲ್ಲಿ ಸಂವಿಧಾನ ಪೀಠದ ನಿರ್ಧಾರದ ಅನುಪಾತವನ್ನು ಗಮನದಲ್ಲಿಟ್ಟುಕೊಂಡು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಕಲ್ಪಿಸಿದ ತತ್ಪರಿಣಾಮದ ಜ್ಯೇಷ್ಠತೆಯ ವಿಷಯದೊಂದಿಗೆ ವ್ಯವಹರಿಸುವಲ್ಲಿ ಸಂಬಂಧಿಸಿದ ವಿಷಯಗಳಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 09.02.2017ರಲ್ಲಿನ ತನ್ನ ತೀರ್ಪಿನಲ್ಲಿ, 16 (4ಎ) ಅನುಚ್ಛೇದದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದಕ್ಕಾಗಿ, 'ಪ್ರಾತಿನಿಧ್ಯದ ಅಭಾವ', 'ಹಿಂದುಳಿದಿರುವಿಕೆ' ಮತ್ತು 'ಒಟ್ಟಾರೆ ಕಾರ್ಯಕ್ಷಮತೆ' ಯನ್ನು ನಿರ್ಧರಿಸುವುದಕ್ಕಾಗಿ ಕ್ರಮಬದ್ಧವಾದ ಕಾರ್ಯಾಧ್ಯಯನವು ಇರತಕ್ಕದ್ದೆಂಬುದನ್ನು ತಿಳಿಸಿದೆ. 16(4ಎ)ನೇ ಅನುಚ್ಛೇದದ ಅಡಿಯಲ್ಲಿ ಈ ಕಾರ್ಯಾಧ್ಯಯನದ ಅನುಪಸ್ಥಿತಿಯಲ್ಲಿ "ಮರುಪಡೆಯುವ (catchup)" ನಿಯಮವನ್ನು ಅನ್ವಯಿಸತಕ್ಕದ್ದು ಎಂಬುದನ್ನು ನ್ಯಾಯಾಲಯವು ತಿಳಿಸಿದೆ. ಇದನ್ನು ಗಮನಿಸಿದ ನ್ಯಾಯಾಲಯವು, ಸಂವಿಧಾನದ 14 ಮತ್ತು 16ನೇ ಅನುಚ್ಛೇದಗಳಿಗೆ 2002ರ ಕರ್ನಾಟಕ ಅಧಿನಿಯಮ 10ರ 3 ಮತ್ತು 4ನೇ ಪ್ರಕರಣಗಳ ಉಪಬಂಧಗಳು ಅಧಿಕಾರಾತೀತವೆಂದು (utra-vires) ಘೋಷಿಸಿದೆ. ಜ್ಯೇಷ್ಠತಾ ಪಟ್ಟಿಗಳ ಪರಿಷ್ಕರಣೆಯನ್ನು ಕೈಗೊಳ್ಳಬೇಕೆಂದು ಮತ್ತು ಮೂರು ತಿಂಗಳೊಳಗೆ ಅದನ್ನು ಪೂರ್ಣಗೊಳಿಸಬೇಕೆಂದು ಹಾಗೂ ಮುಂದಿನ ಮೂರು ತಿಂಗಳುಗಳೊಳಗಾಗಿ ತತ್ಪರಿಣಾಮದ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯವು ನಿರ್ದೇಶಿಸಿರುವುದರಿಂದ;

ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾದ ಮತ್ತು ಇತರರು ಇವರ 2011ರ ಸಿವಿಲ್ ಅಪೀಲು ಸಂಖ್ಯೆ: 2368ರಲ್ಲಿ ಸನ್ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ,

ಸರ್ಕಾರವು ದಿನಾಂಕ: 06.05.2017ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011ರ ಮೂಲಕ, ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆದೇಶವನ್ನು ಹೊರಡಿಸಿರುವುದರಿಂದ;

ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವಲ್ಲಿ, ಸರ್ಕಾರವು, ಅಗತ್ಯತೆಯನ್ನು ಪರಿಗಣಿಸಿ ಮತ್ತು ಎಂ. ನಾಗರಾಜ್ ಇವರ, 2002ರ ರಿಟ್ ಅರ್ಜಿ ಸಂಖ್ಯೆ: 61 ರಲ್ಲಿ ಸಂವಿಧಾನ ಪೀಠದ ನಿರ್ಧಾರವನ್ನು ಗಮನಿಸಿ, ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ, ರಾಜ್ಯ ಸಿವಿಲ್ ಸೇವೆಗಳಲ್ಲಿ ಅವರ ಪ್ರಾತಿನಿಧ್ಯದ ಅಭಾವ ಮತ್ತು ರಾಜ್ಯದ ಆಡಳಿತದ ಮೇಲೆ ಬಡ್ತಿಯಲ್ಲಿನ ಮೀಸಲಾತಿಯ ಪರಿಣಾಮದ ಕುರಿತು ಅಧ್ಯಯನ ನಡೆಸುವ ಮತ್ತು ವರದಿಯನ್ನು ಸಲ್ಲಿಸುವ ಕಾರ್ಯವನ್ನು ದಿನಾಂಕ: 22.03.2017ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ವಹಿಸಿರುವುದರಿಂದ;

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ವಿವಿಧ ಇಲಾಖೆಗಳ ಅಧಿಕಾರಿಗಳ ನೆರವಿನೊಂದಿಗೆ, ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಅವರ ಪ್ರಾತಿನಿಧ್ಯದ ಅಭಾವ ಹಾಗೂ ರಾಜ್ಯ ಆಡಳಿತದ ಮೇಲೆ ಬಡ್ತಿಯಲ್ಲಿ ಮೀಸಲಾತಿಯಿಂದ ಆಗುವ ಪರಿಣಾಮದ ಬಗ್ಗೆ ವೈಜ್ಞಾನಿಕವಾದ, ಪರಿಮಾಣಿಸಬಹುದಾದ (quantifiable) ಮತ್ತು ಸಂಬಂಧಪಟ್ಟ ಸಂಗ್ರಹಿತ ದತ್ತಾಂಶವನ್ನು ಸಂಕಲಿಸಿ ಹಾಗೂ ಪರಿಮಾಣಿಸಬಹುದಾದ ದತ್ತಾಂಶದ ವಿವರವಾದ ಅಧ್ಯಯನವನ್ನು ನಡೆಸಿ ವರದಿಯೊಂದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವುದರಿಂದ;

ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ, ರಾಜ್ಯ ಸಿವಿಲ್ ಸೇವೆಗಳಲ್ಲಿ ಅವರ ಪ್ರಾತಿನಿಧ್ಯದ ಅಭಾವ ಮತ್ತು ರಾಜ್ಯದಲ್ಲಿ ಅನಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ವಿಸ್ತರಿಸುವುದರಿಂದ ಆಡಳಿತದಲ್ಲಿನ ಸಮಗ್ರ ದಕ್ಷತೆಗೆ ಅಡ್ಡಿಯಾಗಿರುವುದಿಲ್ಲವೆಂದು ಮತ್ತು ಮಿತಿಗಳೊಳಗೆ ನೀಡಲಾಗುವ ಬಡ್ತಿಯಲ್ಲಿನ ಮೀಸಲಾತಿಯ ಮುಂದುವರಿಕೆಯು ಆಡಳಿತದ ಸಮಗ್ರ ದಕ್ಷತೆಗೆ ಪರಿಣಾಮ ಬೀರುವುದಿಲ್ಲ ಅಥವಾ ಅಡ್ಡಿಯುಂಟು ಮಾಡುವುದಿಲ್ಲವೆಂಬುದನ್ನು ಆ ವರದಿಯು ದೃಢಪಡಿಸಿರುವುದರಿಂದ;

ಕರ್ನಾಟಕ ರಾಜ್ಯ ಸರ್ಕಾರವು ಈ ಕುರಿತು ಕಾನೂನು ತಜ್ಞರ ಮತ್ತು ಕರ್ನಾಟಕ ಕಾನೂನು ಆಯೋಗದ ಅಭಿಪ್ರಾಯಗಳನ್ನು ಪಡೆದಿರುವುದರಿಂದ;

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಲ್ಲಿಸಿದ ವರದಿಯನ್ನು ಹಾಗೂ ಕಾನೂನು ತಜ್ಞರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಶೀಲಿಸಿದ ತರುವಾಯ ಕರ್ನಾಟಕ ಸರ್ಕಾರವು ವರದಿಯನ್ನು ಅಂಗೀಕರಿಸಿದೆ. ವರದಿಯ ಶೋಧನಾಂಶಗಳನ್ನು ಗಮನದಲ್ಲಿರಿಸಿಕೊಂಡು, ಸರ್ಕಾರವು ಮನಗಂಡು ಮತ್ತು ಗುರುತಿಸಿ ಹಾಗೂ ಕ್ರಮಕೈಗೊಂಡು, ಎಲ್ಲಾ ಇಲಾಖೆಗಳಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಖಚಿತಪಡಿಸಿಸುವುದಕ್ಕಾಗಿ 1978ರಿಂದ ರಾಜ್ಯದಲ್ಲಿ ಮೀಸಲಾತಿ ನೀತಿಯ ಆಧಾರದ ಮೇಲೆ ಬಡ್ತಿಗೊಂಡ ವ್ಯಕ್ತಿಗಳಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ಒದಗಿಸುವುದಕ್ಕಾಗಿ ಮತ್ತು ಬಲವಾದ ಕಾರಣಗಳಿಗಾಗಿ ಅಸ್ತಿತ್ವದಲ್ಲಿರುವಂತೆಯೇ ಮುಂದುವರೆಸುವ ನಿರ್ಧಾರಕ್ಕೆ ಬಂದಿರುವುದರಿಂದ,

- ಭಾರತ ಸಂವಿಧಾನದ 16(4ಎ) ಅನುಚ್ಛೇದದ ಅನುಸರಣೆಯಲ್ಲಿ 1978ರ ಏಪ್ರಿಲ್ 27ನೇ ದಿನಾಂಕದಿಂದ ಜಾರಿಗೆ ಬರುವಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮೀಸಲಾತಿಯ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ತತ್ಪರಿಣಾಮದದ ಜೇಷ್ಠತೆಯನ್ನು ಉಪಬಂಧಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ;

ಆದ್ದರಿಂದ ಈ ವಿಧೇಯಕ.

[2017ರ ವಿಧಾನಸಭೆಯ ವಿಧೇಯಕ ಸಂಖ್ಯೆ 40, ಕಡತ ಸಂಖ್ಯೆ:ಸಂವ್ಯಶಾಇ 44 ಶಾಸನ 2017]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41ನೆಯ ನಮೂದನೆಯಡಿಯಲ್ಲಿ ಬರುತ್ತದೆ.]

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ: 21**

(2018ರ ಜೂನ್ ತಿಂಗಳ ಇಪ್ಪತ್ಮೂರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017**

(2018ರ ಜೂನ್ ಹದಿನಾಲ್ಕನೇ ದಿನಾಂಕದಂದು ರಾಷ್ಟ್ರಪತಿಯರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧರಣೆಗಾಗಿ ಒಂದು ಅಧಿನಿಯಮ.

ಕರ್ನಾಟಕ ಸರ್ಕಾರವು ದಿನಾಂಕ: 27.04.1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಪರವಾಗಿ ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಪ್ರಾರಂಭಿಸಿರುವುದರಿಂದ;

ಮೀಸಲಾತಿ ಆದೇಶದ 7ನೇ ಕಂಡಿಕೆಯಲ್ಲಿ, ಯಾವುದೇ ಸಂದರ್ಭದಲ್ಲಿ ಆ ಆದೇಶಕ್ಕನುಸಾರವಾಗಿ ಬಡ್ತಿ ಹೊಂದಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಯನ್ನು, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ 4 ಅಥವಾ ಸಂದರ್ಭಾನುಸಾರವಾಗಿ 4-ಎ ನಿಯಮದಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ನಿರ್ಧರಿಸತಕ್ಕದ್ದೆಂದು ವಿಧಿಸಲಾಗಿರುವುದರಿಂದ;

ಭಾರತದ ಸರ್ವೋಚ್ಚ ನ್ಯಾಯಾಲಯವು, ಎಂ.ಜಿ. ಬಡಪ್ಪನವರ್ ಹಾಗೂ ಮತ್ತೊಬ್ಬರು –ವಿರುದ್ಧ –ಕರ್ನಾಟಕ ರಾಜ್ಯ ಮತ್ತು ಇತರರು, ಸಿವಿಲ್ ಅಪೀಲು ಸಂಖ್ಯೆ. 6970–6971:2000 ಇದರ ಜೊತೆಗೆ ಸಿವಿಲ್ ಅಪೀಲು ಸಂಖ್ಯೆ: 6972:2000 (ಎಐಆರ್ 2001 ಎಸ್‌ಸಿ 260) ಮೊಕದ್ದಮೆಗೆ ಸಂಬಂಧಿಸಿದ 01.12.2000ದ ತನ್ನ ತೀರ್ಪಿನಲ್ಲಿ ಮೀಸಲಿಟ್ಟ ಪ್ರವರ್ಗಗಳಿಗೆ ಮತ್ತು ಸಾಮಾನ್ಯ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳ ನಡುವೆ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ವಿಷಯದ ಕುರಿತು ವ್ಯವಹರಿಸುವಾಗ ಅಜಿತ್ ಸಿಂಗ್ ಮತ್ತು ಇತರರು (II) -ವಿರುದ್ಧ – ಪಂಜಾಬ್ ರಾಜ್ಯ ಮತ್ತು ಇತರರು, (1999) 7 ಎಸ್‌ಸಿಸಿ 209 ಇದರಲ್ಲಿ ಸಂವಿಧಾನ ಪೀಠದ ತೀರ್ಮಾನದಲ್ಲಿ ಹೇಳಿದ ತತ್ವಕ್ಕನುಸಾರವಾಗಿ ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957ರ ನಿಯಮ 2(ಸಿ), ನಿಯಮ 4 ಮತ್ತು ನಿಯಮ 4–ಎ ಯನ್ನು ಪರೀಕ್ಷಿಸಿತು ಮತ್ತು (ಮೀಸಲಿಟ್ಟ) ರೋಸ್ಟರ್ ಬಿಂದುವಿಗೆ ಪ್ರತಿಯಾಗಿ ಬಡ್ತಿ ಹೊಂದಿದ ವ್ಯಕ್ತಿಯ ಜ್ಯೇಷ್ಠತೆಯನ್ನು ನಿರ್ಧರಿಸುವ ಸಂಬಂಧದಲ್ಲಿ ಯಾವುದೇ ನಿರ್ದಿಷ್ಟ ನಿಯಮವಿಲ್ಲವೆಂದು ಅಭಿಪ್ರಾಯಪಟ್ಟಿರುವುದರಿಂದ;

ಸಂಸತ್ತು ಆ ತರುವಾಯ, ಮೀಸಲಾತಿ ಆಧಾರದ ಮೇಲೆ ಬಡ್ತಿಯ ಸಂದರ್ಭದಲ್ಲಿ ತತ್ಪರಿಣಾಮದ ಜ್ಯೇಷ್ಠತೆಯನ್ನು ನೀಡುವುದಕ್ಕಾಗಿ, ಸಂವಿಧಾನದ 16ನೇ ಅನುಚ್ಛೇಧದ (4ಎ) ಖಂಡವನ್ನು ಸೇರಿಸಲು ಉಪಬಂಧ ಕಲ್ಪಿಸುವ ಮೂಲಕ ಸಂವಿಧಾನದ (ಎಂಬತ್ತೈದನೇ ತಿದ್ದುಪಡಿ) ಅಧಿನಿಯಮ, 2001ನ್ನು 17.06.1995ರಿಂದ ಪೂರ್ವಾನ್ವಯವಾಗುವಂತೆ ಅಧಿನಿಯಮಿಸಿರುವುದರಿಂದ;

ಮೀಸಲಾತಿ ಆದೇಶದಲ್ಲಿ ಒಳಗೊಂಡ ಬಡ್ತಿಯಲ್ಲಿನ ಮೀಸಲಾತಿ ನೀತಿಗೆ ಅನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು, ಇತರ ಪ್ರವರ್ಗಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಲಭ್ಯವಿರುವಂತೆ ಜ್ಯೇಷ್ಠತೆಗೆ ಅರ್ಹರಾಗತಕ್ಕದ್ದೆಂಬುದನ್ನು ಸ್ಪಷ್ಟಪಡಿಸಲು ಮತ್ತು ಯಾವುದೇ ಅಸ್ಪಷ್ಟತೆಯನ್ನು ತೊಡೆದುಹಾಕಲು, ಕರ್ನಾಟಕ ಸರ್ಕಾರವು, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧರಣೆ ಅಧಿನಿಯಮ, 2002ನ್ನು (2002ರ

ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನುಮುಂದೆ 2002ರ ಕರ್ನಾಟಕ ಅಧಿನಿಯಮ 10 ಎಂದು ಉಲ್ಲೇಖಿಸಲಾಗಿದೆ) ಅಧಿನಿಯಮಿಸಿರುವುದರಿಂದ;

ಶ್ರೀ ಎಂ. ನಾಗರಾಜ್ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯ ಎಂಬ ಶೀರ್ಷಿಕೆಯನ್ನು ಹೊಂದಿರುವ ರಿಟ್ ಅರ್ಜಿ ಸಂಖ್ಯೆ 61/2002ರಲ್ಲಿ, 2002ರ ಕರ್ನಾಟಕ ಅಧಿನಿಯಮ 10ರ ಮತ್ತು 16(4ಎ) ಮತ್ತು 16 (4ಬಿ) ಅನುಚ್ಛೇದಗಳಿಗೆ ಸಾಂವಿಧಾನಿಕ ತಿದ್ದುಪಡಿಗಳ ಸಿಂಧುತ್ವವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಸದರಿ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು 16 (4ಎ) ಮತ್ತು 16 (4ಬಿ) ಅನುಚ್ಛೇದಗಳ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿದ್ದು ಮತ್ತು ಯುಕ್ತ ರಾಜ್ಯಗಳ ಪ್ರತ್ಯೇಕ ಅಧಿನಿಯಮಗಳ ಸಿಂಧುತ್ವವನ್ನು ಪ್ರತ್ಯೇಕ ರಿಟ್ ಅರ್ಜಿಗಳಲ್ಲಿ ಯುಕ್ತ ಪೀಠದ ಮೂಲಕ ಕೈಗೊಳ್ಳಲು ತಿಳಿಸಿದೆ. ಕರ್ನಾಟಕ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ: 14655/2010ರಲ್ಲಿ 2002ರ ಕರ್ನಾಟಕ ಅಧಿನಿಯಮದ 10ರ ಸಾಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಿದೆ ಮತ್ತು ಶ್ರೀ ಎಂ. ನಾಗರಾಜ್ ಇವರ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮೂಲಕ ನಿರ್ದಿಷ್ಟಪಡಿಸಲಾದ ಪರೀಕ್ಷೆಗಳನ್ನು ಇದು ತೃಪ್ತಿಗೊಳಿಸಿರುವುದರಿಂದ ಇದು ಶಾಸನದ ಒಂದು ಸಿಂಧುವಾದ ಅಂಶವಾಗಿದೆ ಎಂದು ಘೋಷಿಸಿದೆ. ಬಿ.ಕೆ. ಪವಿತ್ರ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಮೇಲ್ಮನವಿಯಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯದ ಸರಿತನವನ್ನು ಆಕ್ಷೇಪಿಸಿರುವುದರಿಂದ;

2011ರ ಸಿವಿಲ್ ಅಪೀಲು ಸಂಖ್ಯೆ: 2368ರಲ್ಲಿ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ಮತ್ತು ಎಂ. ನಾಗರಾಜ್ ಇವರ 2002ರ ರಿಟ್ ಅರ್ಜಿ ಸಂಖ್ಯೆ: 61ರಲ್ಲಿ ಸಂವಿಧಾನ ಪೀಠದ ನಿರ್ಧಾರದ ಅನುಪಾತವನ್ನು ಗಮನದಲ್ಲಿಟ್ಟುಕೊಂಡು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಕಲ್ಪಿಸಿದ ತತ್ಪರಿಣಾಮದ ಜ್ಯೇಷ್ಠತೆಯ ವಿಷಯದೊಂದಿಗೆ ವ್ಯವಹರಿಸುವಲ್ಲಿ ಸಂಬಂಧಿಸಿದ ವಿಷಯಗಳಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 09.02.2017ರಲ್ಲಿನ ತನ್ನ ತೀರ್ಪಿನಲ್ಲಿ, 16 (4ಎ) ಅನುಚ್ಛೇದದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದಕ್ಕಾಗಿ, 'ಪ್ರಾತಿನಿಧ್ಯದ ಅಭಾವ', 'ಹಿಂದುಳಿದಿರುವಿಕೆ' ಮತ್ತು 'ಒಟ್ಟಾರೆ ಕಾರ್ಯಕ್ಷಮತೆ' ಯನ್ನು ನಿರ್ಧರಿಸುವುದಕ್ಕಾಗಿ ಕ್ರಮಬದ್ಧವಾದ ಕಾರ್ಯಾಧ್ಯಯನವು ಇರತಕ್ಕದ್ದೆಂಬುದನ್ನು ತಿಳಿಸಿದೆ. 16(4ಎ)ನೇ ಅನುಚ್ಛೇದದ ಅಡಿಯಲ್ಲಿ ಈ ಕಾರ್ಯಾಧ್ಯಯನದ ಅನುಪಸ್ಥಿತಿಯಲ್ಲಿ "ಮರುಪಡೆಯುವ (catchup)" ನಿಯಮವನ್ನು ಅನ್ವಯಿಸತಕ್ಕದ್ದು ಎಂಬುದನ್ನು ನ್ಯಾಯಾಲಯವು ತಿಳಿಸಿದೆ. ಇದನ್ನು ಗಮನಿಸಿದ ನ್ಯಾಯಾಲಯವು, ಸಂವಿಧಾನದ 14 ಮತ್ತು 16ನೇ ಅನುಚ್ಛೇದಗಳಿಗೆ 2002ರ ಕರ್ನಾಟಕ ಅಧಿನಿಯಮ 10ರ 3 ಮತ್ತು 4ನೇ ಪ್ರಕರಣಗಳ ಉಪಬಂಧಗಳು ಅಧಿಕಾರಾತೀತವೆಂದು (ultra-vires) ಘೋಷಿಸಿದೆ. ಜ್ಯೇಷ್ಠತಾ ಪಟ್ಟಿಗಳ ಪರಿಷ್ಕರಣೆಯನ್ನು ಕೈಗೊಳ್ಳಬೇಕೆಂದು ಮತ್ತು ಮೂರು ತಿಂಗಳೊಳಗೆ ಅದನ್ನು ಪೂರ್ಣಗೊಳಿಸಬೇಕೆಂದು ಹಾಗೂ ಮುಂದಿನ ಮೂರು ತಿಂಗಳುಗಳೊಳಗಾಗಿ ತತ್ಪರಿಣಾಮದ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶಿಸಿರುವುದರಿಂದ;

ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾದ ಮತ್ತು ಇತರರು ಇವರ 2011ರ ಸಿವಿಲ್ ಅಪೀಲು ಸಂಖ್ಯೆ: 2368ರಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ, ಸರ್ಕಾರವು ದಿನಾಂಕ: 06.05.2017ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011ರ ಮೂಲಕ, ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆದೇಶವನ್ನು ಹೊರಡಿಸಿರುವುದರಿಂದ;

ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವಲ್ಲಿ, ಸರ್ಕಾರವು, ಅಗತ್ಯತೆಯನ್ನು ಪರಿಗಣಿಸಿ ಮತ್ತು ಎಂ. ನಾಗರಾಜ್ ಇವರ, 2002ರ ರಿಟ್ ಅರ್ಜಿ ಸಂಖ್ಯೆ: 61 ರಲ್ಲಿ ಸಂವಿಧಾನ ಪೀಠದ ನಿರ್ಧಾರವನ್ನು ಗಮನಿಸಿ, ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ, ರಾಜ್ಯ ಸಿವಿಲ್ ಸೇವೆಗಳಲ್ಲಿ

ಅವರ ಪ್ರಾತಿನಿಧ್ಯದ ಅಭಾವ ಮತ್ತು ರಾಜ್ಯದ ಆಡಳಿತದ ಮೇಲೆ ಬಡ್ತಿಯಲ್ಲಿನ ಮೀಸಲಾತಿಯ ಪರಿಣಾಮದ ಕುರಿತು ಅಧ್ಯಯನ ನಡೆಸುವ ಮತ್ತು ವರದಿಯನ್ನು ಸಲ್ಲಿಸುವ ಕಾರ್ಯವನ್ನು ದಿನಾಂಕ: 22.03.2017ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ವಹಿಸಿರುವುದರಿಂದ;

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ವಿವಿಧ ಇಲಾಖೆಗಳ ಅಧಿಕಾರಿಗಳ ನೆರವಿನೊಂದಿಗೆ, ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ, ರಾಜ್ಯ ಸಿವಿಲ್ ಸೇವೆಗಳಲ್ಲಿ ಅವರ ಪ್ರಾತಿನಿಧ್ಯದ ಅಭಾವ ಹಾಗೂ ರಾಜ್ಯ ಆಡಳಿತದ ಮೇಲೆ ಬಡ್ತಿಯಲ್ಲಿ ಮೀಸಲಾತಿಯಿಂದ ಆಗುವ ಪರಿಣಾಮದ ಬಗ್ಗೆ ವೈಜ್ಞಾನಿಕವಾದ, ಪರಿಮಾಣಿಸಬಹುದಾದ (quantifiable) ಮತ್ತು ಸಂಬಂಧಪಟ್ಟ ಸಂಗ್ರಹಿತ ದತ್ತಾಂಶವನ್ನು ಸಂಕಲಿಸಿ ಹಾಗೂ ಪರಿಮಾಣಿಸಬಹುದಾದ ದತ್ತಾಂಶದ ವಿವರವಾದ ಅಧ್ಯಯನವನ್ನು ನಡೆಸಿ ವರದಿಯೊಂದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವುದರಿಂದ;

ರಾಜ್ಯದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಹಿಂದುಳಿದಿರುವಿಕೆ, ರಾಜ್ಯ ಸಿವಿಲ್ ಸೇವೆಗಳಲ್ಲಿ ಅವರ ಪ್ರಾತಿನಿಧ್ಯದ ಅಭಾವ ಮತ್ತು ರಾಜ್ಯದಲ್ಲಿ ಅನಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ವಿಸ್ತರಿಸುವುದರಿಂದ ಆಡಳಿತದಲ್ಲಿನ ಸಮಗ್ರ ದಕ್ಷತೆಗೆ ಅಡ್ಡಿಯಾಗಿರುವುದಿಲ್ಲವೆಂದು ಮತ್ತು ಮಿತಿಗಳೊಳಗೆ ನೀಡಲಾಗುವ ಬಡ್ತಿಯಲ್ಲಿನ ಮೀಸಲಾತಿಯ ಮುಂದುವರಿಕೆಯು ಆಡಳಿತದ ಸಮಗ್ರ ದಕ್ಷತೆಗೆ ಪರಿಣಾಮ ಬೀರುವುದಿಲ್ಲ ಅಥವಾ ಅಡ್ಡಿಯುಂಟು ಮಾಡುವುದಿಲ್ಲವೆಂಬುದನ್ನು ಆ ವರದಿಯು ದೃಢಪಡಿಸಿರುವುದರಿಂದ;

ಕರ್ನಾಟಕ ರಾಜ್ಯ ಸರ್ಕಾರವು ಈ ಕುರಿತು ಕಾನೂನು ತಜ್ಞರ ಮತ್ತು ಕರ್ನಾಟಕ ಕಾನೂನು ಆಯೋಗದ ಅಭಿಪ್ರಾಯಗಳನ್ನು ಪಡೆದಿರುವುದರಿಂದ; ಮತ್ತು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಲ್ಲಿಸಿದ ವರದಿಯನ್ನು ಹಾಗೂ ಕಾನೂನು ತಜ್ಞರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಶೀಲಿಸಿದ ತರುವಾಯ ಕರ್ನಾಟಕ ಸರ್ಕಾರವು ವರದಿಯನ್ನು ಅಂಗೀಕರಿಸಿದೆ. ವರದಿಯ ಶೋಧನಾಂಶಗಳನ್ನು ಗಮನದಲ್ಲಿರಿಸಿಕೊಂಡು, ಸರ್ಕಾರವು ಮನಗಂಡು ಮತ್ತು ಗುರುತಿಸಿ ಹಾಗೂ ಕ್ರಮಕೈಗೊಂಡು, ಎಲ್ಲಾ ಇಲಾಖೆಗಳಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಖಚಿತಪಡಿಸಿಸುವುದಕ್ಕಾಗಿ 1978ರಿಂದ ರಾಜ್ಯದಲ್ಲಿ ಮೀಸಲಾತಿ ನೀತಿಯ ಆಧಾರದ ಮೇಲೆ ಬಡ್ತಿಗೊಂಡ ವ್ಯಕ್ತಿಗಳಿಗೆ ತತ್ಪರಿಣಾಮವಾದ ಜ್ಯೇಷ್ಠತೆಯನ್ನು ಒದಗಿಸುವುದಕ್ಕಾಗಿ ಮತ್ತು ಬಲವಾದ ಕಾರಣಗಳಿಗಾಗಿ ಅಸ್ತಿತ್ವದಲ್ಲಿರುವಂತೆಯೇ ಮುಂದುವರೆಸುವ ನಿರ್ಧಾರಕ್ಕೆ ಬಂದಿರುವುದರಿಂದ;

ಈಗ ರಾಜ್ಯಕ್ಕೆ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಈ ಮುಂದೆ ಕಂಡುಬರುವ ಬಲವಾದ ಅವಶ್ಯಕತೆಗಳಿಗಾಗಿ ಮತ್ತು ಅದರ ಅಭಿಪ್ರಾಯದಲ್ಲಿ ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಆನುಷಂಗಿಕವಾದ ಈ ಮುಂದಿನ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) 3 ಮತ್ತು 4ನೇ ಪ್ರಕರಣಗಳು 1995ರ ಜೂನ್ 17ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಇತರ ಉಪಬಂಧಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಎ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಬಿ) 'ಸರ್ಕಾರಿ ನೌಕರ' ಎಂದರೆ, ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದು ಸಿವಿಲ್ ಹುದ್ದೆಯನ್ನು ಧಾರಣ ಮಾಡಿದ ಒಬ್ಬ ವ್ಯಕ್ತಿ ಮತ್ತು ಇದು ಯಾರ ಸೇವೆಯನ್ನು ಭಾರತ ಸರ್ಕಾರಕ್ಕೆ, ಇನ್ನೊಂದು ರಾಜ್ಯದ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ, ನಿಗಮಿತವಾಗಿರುವ ಅಥವಾ ಆಗಿಲ್ಲದಿರುವ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ತಾತ್ಕಾಲಿಕವಾಗಿ ಬಿಟ್ಟುಕೊಡಲಾಗಿದೆಯೋ ಆ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(ಸಿ) "ಮೀಸಲಾತಿ ಆದೇಶಗಳು" ಎಂದರೆ, ದಿನಾಂಕ: 27ನೇ ಏಪ್ರಿಲ್ 1978ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 1977, ಹಾಗೂ ಕಾಲ ಕಾಲಕ್ಕೆ ಮಾರ್ಪಾಡುಗೊಂಡಂತೆ ಬಡ್ತಿಯಲ್ಲಿ ಮೀಸಲಾತಿ ನೀತಿಯನ್ನು ಒಳಗೊಂಡಿರುವ ಇತರ ಆದೇಶಗಳು; ಮತ್ತು

(ಡಿ) "ಹಿಂಬಾಕಿ (ಬ್ಯಾಕ್‌ಲಾಗ್)" ಎಂದರೆ, ಅರ್ಹ ವ್ಯಕ್ತಿಗಳು ಲಭ್ಯವಿಲ್ಲದ ಕಾರಣದಿಂದ ಸಂಬಂಧಿತ ವರ್ಗಗಳ ಮೂಲಕ ತುಂಬದೇ ಉಳಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗಾಗಿ ಮೀಸಲಿರಿಸಿದ ಬಡ್ತಿ ಸ್ಥಾನಗಳು;

**3. ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧರಣೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿನ ಮೀಸಲಾತಿ ನೀತಿಗನುಸಾರವಾಗಿ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರು ತತ್ಪರಿಣಾಮದ ಜ್ಯೇಷ್ಠತೆಗೆ ಹಕ್ಕುಳ್ಳವರಾಗಿರತಕ್ಕದ್ದು. ಜ್ಯೇಷ್ಠತೆಯನ್ನು ಒಂದು ವೃಂದದಲ್ಲಿ ಸಲ್ಲಿಸಿದ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಹಾಗೂ ಮೀಸಲಿಟ್ಟಿರದ ಪ್ರವರ್ಗಕ್ಕೆ ಸೇರಿದ ಸರ್ಕಾರಿ ನೌಕರರಿಗೆ ಒಂದೇ ಆದೇಶದ ಮೂಲಕ ಒಂದೇ ಸಮಯದಲ್ಲಿ ಒಂದು ಪ್ರವರ್ಗಕ್ಕೆ ಬಡ್ತಿ ನೀಡಿದಾಗ ಕೆಳಗಿನ ವೃಂದದಲ್ಲಿ ಅವರ ಪರಸ್ಪರ ಜ್ಯೇಷ್ಠತೆಯ ಆಧಾರದ ಮೇಲೆ ಅವರ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸತಕ್ಕದ್ದು:

ಮತ್ತು ಪರಂತು, ಒಂದು ವೃಂದದಲ್ಲಿನ ಹುದ್ದೆಗಳನ್ನು ಅವುಗಳಿಗೆ ಅನ್ವಯವಾಗತಕ್ಕ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಕೆಳಗಿನ ಎರಡು ಅಥವಾ ಹೆಚ್ಚಿನ ವೃಂದಗಳಿಂದ ಬಡ್ತಿಯ ಮೂಲಕ ತುಂಬಬೇಕಾದಾಗ,–

(i) ಕೆಳಗಿನ ವೃಂದಗಳ ಪೈಕಿ ಪ್ರತಿಯೊಂದಕ್ಕೆ ಬಡ್ತಿಯ (ಉನ್ನತ) ವೃಂದದಲ್ಲಿ ಲಭ್ಯವಿರುವ ಖಾಲಿ ಸ್ಥಾನಗಳ ಸಂಖ್ಯೆಯನ್ನು ಅದಕ್ಕೆ ಅನ್ವಯವಾಗುವ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಲೆಕ್ಕ ಹಾಕತಕ್ಕದ್ದು; ಮತ್ತು

(ii) ಆ ಪ್ರತಿಯೊಂದು ಕೆಳಗಿನ ವೃಂದದ ಸಂಬಂಧದಲ್ಲಿ ಹಾಗೆ ಲೆಕ್ಕಹಾಕಲಾದ ಖಾಲಿ ಸ್ಥಾನಗಳಿಗೆ ರೋಸ್ಟರನ್ನು ಪ್ರತ್ಯೇಕವಾಗಿ ಅನ್ವಯಿಸತಕ್ಕದ್ದು.

ಅಲ್ಲದೆ ಪರಂತು, ಮೀಸಲಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ರೋಸ್ಟರ್ ಬಿಂದುಗಳ ಕ್ರಮಸಂಖ್ಯೆಗಳನ್ನು ಒಂದು ಸಮಯಕ್ಕೆ ಬಡ್ತಿಗಾಗಿ ಮೀಸಲಿಟ್ಟ ಖಾಲಿ ಸ್ಥಾನಗಳ ಸಂಖ್ಯೆಯನ್ನು ಲೆಕ್ಕ ಹಾಕುವುದಕ್ಕಾಗಿ ಮಾತ್ರ ಬಳಸಲು ಉದ್ದೇಶಿಸಲಾಗಿದೆಯೇ ಹೊರತು ಅಂಥ ರೋಸ್ಟರ್ ಬಿಂದುಗಳು, ಒಂದೇ ಕಾಲದಲ್ಲಿ ಬಡ್ತಿ ನೀಡಲಾದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರ ಮತ್ತು ಮೀಸಲಿಟ್ಟಿರದ ಪ್ರವರ್ಗಕ್ಕೆ ಸೇರಿದ

ಸರ್ಕಾರಿ ನೌಕರರ ಸಂಬಂಧದಲ್ಲಿ ಪರಸ್ಪರ ಜ್ಯೇಷ್ಠತೆಯನ್ನು ನಿರ್ಧರಿಸುವ ಸಲುವಾಗಿ ಉದ್ದೇಶಿಸಲಾಗಿಲ್ಲ ಮತ್ತು ಅಂಥ ಪರಸ್ಪರ ಜ್ಯೇಷ್ಠತೆಯನ್ನು, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿಯಲ್ಲಿ ದೃಷ್ಟಾಂತಪೂರ್ವಕವಾಗಿ ಹೇಳಲಾದಂತೆ ಯಾವ ವೃಂದದಿಂದ ಅವರು ಬಡ್ತಿ ಹೊಂದಿದ್ದಾರೆಯೋ ಆ ವೃಂದದಲ್ಲಿನ ಅವರ ಪರಸ್ಪರ ಜ್ಯೇಷ್ಠತೆಯ ಮೂಲಕ ನಿರ್ಧರಿಸತಕ್ಕದ್ದು.

**4. 1978ರ ಏಪ್ರಿಲ್ 27ರ ತರುವಾಯದಿಂದ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜ್ಯೇಷ್ಠತೆಯ ಸಂರಕ್ಷಣೆ.–** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶದ ನೀತಿಗೆ ಅನುಸಾರವಾಗಿ ಸಾವಿರದ ಒಂಭೈನೂರ ಎಪ್ಪತ್ತೆಂಟರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜ್ಯೇಷ್ಠತೆಯು ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ.

**5. ಪುನರಾವಲೋಕನಕ್ಕಾಗಿ ಅವಕಾಶ.–** ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿದ ಹುದ್ದೆಗಳಿಗೆ ಇರುವ ಎಲ್ಲಾ ಬಡ್ತಿಗಳು ಮೀಸಲಾತಿ ಆದೇಶಗಳ ಉಪಬಂಧಗಳ ವ್ಯಾಪ್ತಿಯೊಳಗೆ ಮತ್ತು ನೇಮಕಾತಿ ವಿಧಾನಕ್ಕೆ ಹಾಗೂ ಜ್ಯೇಷ್ಠತೆಗೆ ಸಂಬಂಧಿಸಿದ ಇತರ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು. ನೇಮಕಾತಿ ಪ್ರಾಧಿಕಾರವು, ಬಡ್ತಿಗಳು ಕ್ರಮಾನುಸಾರವಾಗಿ ಮಾಡಲಾಗಿರುವುದನ್ನು ಖಚಿತಪಡಿಸಿಕೊಳ್ಳಲು ಅಸ್ತಿತ್ವದಲ್ಲಿರುವ ಜ್ಯೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸತಕ್ಕದ್ದು ಮತ್ತು ಪುನರ್‌ರಚಿಸತಕ್ಕದ್ದು:

ಪರಂತು, ಅಂಥ ಪುನರಾವಲೋಕನೆಯ ತರುವಾಯ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರನ್ನು ಮೀಸಲಾತಿ ಮತ್ತು ಬ್ಯಾಕ್‌ಲಾಗ್ ಖಾಲಿಸ್ಥಾನಗಳಿಗಿಂತ ಹೆಚ್ಚಾಗಿ ಅಥವಾ ಮೀಸಲಾತಿ ಆದೇಶಗಳಲ್ಲಿ ಕಲ್ಪಿಸಿರುವ ಮೀಸಲಾತಿಗೆ ಪ್ರತಿಯಾಗಿ ಮುಂಬಡ್ತಿ ನೀಡಿರುವುದು ಕಂಡುಬಂದಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಮೀಸಲಾತಿ ಆದೇಶಗಳಿಗೆ ಅನುಸಾರವಾಗಿ ಇರುವ ರೋಸ್ಟರ್ ಬಿಂದುಗಳಿಗೆ ಸಂಬಂಧಿಸಿದಂತೆ ಸೂಕ್ತ ಅರ್ಹತೆಯ ದಿನಾಂಕಗಳನ್ನು ನಮೂದಿಸಿ ಸರಿಹೊಂದಿಸತಕ್ಕದ್ದು ಮತ್ತು ಜೋಡಿಸತಕ್ಕದ್ದು. ಮೀಸಲಾತಿ ಅಥವಾ ಬ್ಯಾಕ್‌ಲಾಗ್ ಖಾಲಿ ಸ್ಥಾನಗಳಿಗಿಂತ ಹೆಚ್ಚಾಗಿ ಅಥವಾ ಮೀಸಲಾತಿ ಉಪಬಂಧಗಳ ವ್ಯಾಪ್ತಿಯೊಳಗೆ ಈಗಾಗಲೇ ಮೀಸಲಾತಿ ಹೊಂದಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ರೋಸ್ಟರ್ ಬಿಂದುಗಳಿಗೆ ಪ್ರತಿಯಾಗಿ ಸರಿಹೊಂದಿಸಲು ಮತ್ತು ಜೋಡಿಸಲು ಸಾಧ್ಯವಾಗದಿದ್ದಲ್ಲಿ, ಅವರು ಪ್ರಸ್ತುತವಾಗಿ ಕಾರ್ಯನಿರ್ವಹಿಸುತ್ತಿರುವ ವೃಂದದಲ್ಲಿ, ಆ ವೃಂದದಲ್ಲಿ ಅವರು ಬಡ್ತಿಗೆ ಅರ್ಹತೆಯನ್ನು ಪಡೆಯುವ ದಿನಾಂಕದವರೆಗೆ, ಸಂಬಂಧಿಸಿದ ಆಡಳಿತ ಇಲಾಖೆಯು ಇದಕ್ಕೆ ಆರ್ಥಿಕ ಇಲಾಖೆಯು ಸಹಮತಿಸಿದೆಯೆಂದು ಭಾವಿಸಿ ಸೃಜಿಸಲಾದ, ಸೂಪರ್‌ನ್ಯೂಮರರಿ ಹುದ್ದೆಗಳಿಗೆ ಪ್ರತಿಯಾಗಿ ಅವರನ್ನು ಮುಂದುವರೆಸತಕ್ಕದ್ದು.

**6. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ತಾನು ಅವಶ್ಯವೆಂದು ಭಾವಿಸಿದಲ್ಲಿ, ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ

ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

**7. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ, ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಗಳನ್ನು ನಿವಾರಿಸಲು ತಾನು ಸೂಕ್ತವೆಂದು ಮತ್ತು ಅವಶ್ಯವೆಂದು ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಹೊರಡಿಸಿದ ಮೇಲೆ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**8. ನಿರಸನ.–** ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧರಣೆ ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 10) ಈ ಮೂಲಕ ನಿರಸನಗೊಳಿಸಲಾಗಿದೆ.

**9. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಕೈಗೊಂಡ ಕ್ರಮಗಳ ಸಿಂಧುತ್ವ.–** ಈ ಅಧಿನಿಯಮದ 3 ಮತ್ತು 4ನೇ ಪ್ರಕರಣಗಳಿಗೆ ವಿರುದ್ಧವಾಗಿ ಯಾವುದೇ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಪ್ರಕಟಣೆಯ ಪೂರ್ವದಲ್ಲಿ ಈ ಅಧಿನಿಯಮದ 3 ಮತ್ತು 4ನೇ ಪ್ರಕರಣಗಳ ಅನುಸಾರವಾಗಿ ನೀಡಿದ ಬಡ್ತಿಗಳ ಸಂಬಂಧದಲ್ಲಿ 1978ರ ಏಪ್ರಿಲ್ 27ನೇ ದಿನಾಂಕದಿಂದ ಯಾವುದೇ ಬಡ್ತಿಯ ಸಂಬಂಧದಲ್ಲಿ ಕೈಗೊಂಡ ಅಥವಾ ಕೈಗೊಳ್ಳಲಾಗಿದೆ ಎಂದು ಅರ್ಥೈಸಲಾಗಿರುವ ಯಾವುದೇ ಕ್ರಮವು ಮತ್ತು ಕೈಗೊಂಡ ಅಥವಾ ಕೈಗೊಳ್ಳಲಾಗಿದೆ ಎಂದು ಅರ್ಥೈಸಲಾಗಿರುವ ಎಲ್ಲಾ ನಡವಳಿಗಳು ಸಿಂಧುವಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಬಡ್ತಿಗಳ ಸಂಬಂಧದಲ್ಲಿ ಅಥವಾ ಮಾಡಿದ ಅಥವಾ ಕೈಗೊಂಡ ಕ್ರಮವು ಈ ಅಧಿನಿಯಮದ ಅಡಿಯಲ್ಲಿ ಕೈಗೊಂಡಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು:–

(ಎ) ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಯಾವುದೇ ದಾವೆ ಅಥವಾ ಇತರ ನಡವಳಿಗಳನ್ನು, ಅಂಥ ಬಡ್ತಿಗಳ ಪುನರೀಕ್ಷಣೆಗಾಗಿ ಯಾವುದೇ ನ್ಯಾಯಲಯದಲ್ಲಿ ಅಥವಾ ಯಾವುದೇ ನ್ಯಾಯಾಧೀಕರಣದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಬಿ) ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಯಾವುವೇ ಅಂಥ ಮೊಕದ್ದಮೆಗಳನ್ನು ಪುನರೀಕ್ಷಿಸಲು ನಿರ್ದೇಶಿಸಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಹೊರಡಿಸತಕ್ಕದ್ದಲ್ಲ.

**ಅನುಸೂಚಿ**

(3ನೇ ಪ್ರಕರಣದ ಪರಂತುಕವನ್ನು ನೋಡಿ)

ಒಂದೇ ಸಮಯದಲ್ಲಿ ಒಂದೇ ಆದೇಶದ ಮೂಲಕ ಸಹಾಯಕ ಆಯುಕ್ತರ ಮೂರು ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ಭರ್ತಿ ಮಾಡುವ ಸಂದರ್ಭದಲ್ಲಿ, ಖಾಲಿ ಸ್ಥಾನಗಳ ವರ್ಗೀಕರಣವು ಈ ಮುಂದಿನಂತೆ ಇರುವುದು:–

1ನೇ . . . ಅನುಸೂಚಿತ ಜಾತಿ
2ನೇ . . . ಅನುಸೂಚಿತ ಬುಡಕಟ್ಟು
3ನೇ . . . ಮೀಸಲಿಟ್ಟಿರದ

ತಹಶೀಲ್ದಾರರ ವೃಂದದಲ್ಲಿರುವ ಅರ್ಹತೆ ಮತ್ತು ವಿದ್ಯಾರ್ಹತೆಯನ್ನು ಪಡೆದ ಮತ್ತು ಆ ಸಮಯದಲ್ಲಿ ಪರಿಗಣಿಸಬೇಕಾದ ವ್ಯಕ್ತಿಗಳ ಜ್ಯೇಷ್ಠತೆಯು ಈ ಮುಂದೆ ನಮೂದಿಸಲಾದಂತೆ ಇದ್ದರೆ,–

ಎ . . . ಅನುಸೂಚಿತ ಜಾತಿ
ಬಿ . . . ಮೀಸಲಿಟ್ಟಿರದ
ಸಿ . . . ಅನುಸೂಚಿತ ಬುಡಕಟ್ಟು
ಡಿ . . . ಮೀಸಲಿಟ್ಟಿರದ
ಇ . . . ಮೀಸಲಿಟ್ಟಿರದ

ಆಗ ಬಡ್ತಿಯ ನಂತರ, ಸಹಾಯಕ ಆಯುಕ್ತರರ ವೃಂದದಲ್ಲಿ ಅವರ ಪರಸ್ಪರ ಜೇಷ್ಠತೆಯು ಈ ಮುಂದಿನಂತಾಗುವುದು:–

ಎ . . . ಅನುಸೂಚಿತ ಜಾತಿ
ಬಿ . . . ಮೀಸಲಿಟ್ಟಿರದ
ಸಿ . . . ಅನುಸೂಚಿತ ಬುಡಕಟ್ಟು

ಇದಕ್ಕೆ ಪ್ರತಿಯಾಗಿ, ತಹಶೀಲ್ದಾರ್‌ರ ಜೇಷ್ಠತೆಯು ಆ ಸಮಯದಲ್ಲಿ ಈ ಮುಂದಿನಂತೆ ಇದ್ದರೆ,

ಎ . . . ಮೀಸಲಿಟ್ಟಿರದ
ಬಿ . . . ಮೀಸಲಿಟ್ಟಿರದ
ಸಿ . . . ಮೀಸಲಿಟ್ಟಿರದ
ಡಿ . . . ಅನುಸೂಚಿತ ಜಾತಿ
ಇ. . . . ಅನುಸೂಚಿತ ಬುಡಕಟ್ಟು

ಆಗ, ಬಡ್ತಿಯ ನಂತರ ಸಹಾಯಕ ಆಯುಕ್ತರ ವೃಂದದಲ್ಲಿ ಅವರ ಪರಸ್ಪರ ಜೇಷ್ಠತೆಯು ಈ ಮುಂದಿನಂತಿರುತ್ತದೆ:

ಎ . . . ಮೀಸಲಿಟ್ಟಿರದ
ಡಿ . . . ಅನುಸೂಚಿತ ಜಾತಿ
ಇ . . . ಅನುಸೂಚಿತ ಬುಡಕಟ್ಟು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ (ಪ್ರ),
ಸಂಸದೀಯ ವ್ಯವಹಾರಗಳ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 600